**<u>ಹಿರಿಯ ಸಿವಿಲ್ ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಪ್ಪಳ</u>**
**ಎಂ.ವಿ.ಸಿ. ಸಂಖ್ಯೆಃ 121/2023**

**ದಿನಾಂಕಃ 11-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | |
|---|---|
| ಪಿ. ಡಬ್ಲೂ- | 01 |

**<u>ಪಾಟೀ ಸವಾಲು ಃ ಎದುರುದಾರರ ಪರ ಶ್ರೀ ಎಸ್ ಎನ್ ಎಮ್ ವಕೀಲರಿಂದ</u>**

1. ನಾನು 7 ನೇ ತರಗತಿಯವರೆಗೆ ಓದಿದ್ದೇನೆ. ಅಪಘಾತ ಕಾಲಕ್ಕೆ ನಾನು ಕುಳಿತಿದ್ದ ಕಾರ್ ನಂ.ಕೆಎ-37/ಎ-8254 ಇರುತ್ತದೆ. ಈ ಕಾರನ್ನು ಅಪಘಾತ ಕಾಲಕ್ಕೆ ನಾನೇ ಓಡಿಸುತ್ತಿದ್ದೆ ಅನ್ನುವುದು ಸರಿಯಲ್ಲ. ಚಾರ್ಜ್ ಶೀಟ್ ಪ್ರಕಾರ ನಾನೇ 2 ನೇ ಆರೋಪಿ ಎಂದರೆ ಸರಿ. ಆದರೆ ನಾನು ಕಾರ್ ಓಡಿಸುತ್ತಿರಲಿಲ್ಲ. ನನಗೆ ಡಿ.ಎಲ್ ಇದೆ. ಅದನ್ನು ನಾನು ಹಾಜರುಪಡಿಸಿಲ್ಲ. ನನಗೆ ಡಿ.ಎಲ್ ಇಲ್ಲ ಎಂದು ಚಾರ್ಜಶೀಟ್ ಹಾಕಿದ್ದಾರೆ ಅಂದರೆ ಸರಿಯಲ್ಲ. ನಾನೇ ಈ ಕಾರ್ ಮಾಲೀಕ ಎಂದು ತೋರಿಸಲು ಯಾವುದೇ ದಾಖಲೆ ಕೊಟ್ಟಿಲ್ಲ. ನಾನು ಪರಿಹಾರ ಕೇಳಲು ಅರ್ಹನಲ್ಲ ಅಂದರೆ ಸರಿಯಲ್ಲ.

2. 5,81,759/- ರೂಪಾಯಿಗೆ ನಿಪಿ-11 ರಂತೆ ಎಸ್ಟಿಮೇಷನ್ ಮಾಡಿಸಿದ್ದೇನೆ ಅನ್ನುವುದು ಸರಿ. ಅದು ಬಿಲ್ ಅಲ್ಲ ಅನ್ನುವುದು ಸರಿ. ಸದರಿ ಎಸ್ಟಿಮೇಷನ್ ನಿಪಿ-11 ರವಿಕುಮಾರ್ ಹೆಸರಿನಲ್ಲಿ ಇದೆ ಮತ್ತು ನನ್ನ ಹೆಸರಿನಲ್ಲಿ ಇಲ್ಲ ಅನ್ನುವುದು ಸರಿ. ಆದ್ದರಿಂದ ಈ ಕಾರ್ ನನಗೆ ಸಂಬಂದಪಟ್ಟಿಲ್ಲ ಮತ್ತು ರವಿಕುಮಾರ್ ರವರಿಗೆ ಸಂಬಂಧಪಟ್ಟಿದೆ ಅನ್ನುವುದು ಸರಿ. ಸದರಿ ಕಾರ್ ನನ್ನ ಬಳಿ ಇಲ್ಲ ಅಂದರೆ ಸರಿ. ನಿಪಿ-10 ರಂತೆ ಈ ಕಾರಿನ ನೊಂದಣಿ ರದ್ದಾಗಿದೆ ಅಂದರೆ ಸರಿ. ಆ ನೊಂದಣಿ 2022 ರಲ್ಲೇ ರದ್ದಾಗಿದೆ ಅಂದರೆ ಸರಿ. 2023 ರಲ್ಲಿ ಪರಿಹಾರ ಕೇಳಿ ಈ ಅರ್ಜಿ ಹಾಕಿದ್ದೇನೆ ಅಂದರೆ ಸರಿ.

3. 2023 ರಲ್ಲಿ ನನಗೆ ದಿನಗೂಲಿ ಬಂದಿಲ್ಲ ಮತ್ತು ಕಾರಿನ ಬಾಡಿಗೆ ಬಂದಿಲ್ಲ ಎಂದು ಈ ಅರ್ಜಿ ಹಾಕಿದ್ದೇನೆ ಅಂದರೆ ಸರಿ. ನನ್ನ ಹೆಸರಿನಲ್ಲಿ ಕಾರ್ ಇಲ್ಲ, ನನ್ನದು ಕಾರ್ ಅಲ್ಲ ಆ ಕಾರಣದಿಂದ ಈ ಅರ್ಜಿ ಹಾಕಲು ನನಗೆ ಬರುವುದಿಲ್ಲಾ ಅನ್ನುವುದು ಸರಿಯಲ್ಲ. ಸದರಿ ಕಾರನ್ನು 40,000/-

ರೂಪಾಯಿಗಳಿಗೆ 2022 ರಲ್ಲಿ ಸ್ಕ್ರಾಪ್ ದವರಿಗೆ ಮಾರಿಕೊಂಡಿದ್ದೇನೆ. ಸದರಿ ಕಾರಿಗೆ ವಿಮೆ ಇತ್ತು ಅವರಿಂದ ಪರಿಹಾರ ಪಡೆದಿಲ್ಲ. ಕಾರ್ ವಿಮೆ ಕಂಪನಿಯವರು ಈ ಪ್ರಕರಣದ ಎದುರುದಾರ ನಂ.4 ಅನ್ನುವುದು ಸರಿ. ಎದುರುದಾರ ನಂ.4 ಅವರೇ ಪರಿಹಾರ ಕೊಡಬೇಕು ಅಂದರೆ ಸರಿ. ಸ್ಕ್ರಾಪ್‌ದವರಿಗೆ ಕಾರು ಮಾರಿಕೊಂಡ ವಿಷಯ ಎದುರುದಾರ ನಂ.3 ಇವರಿಗೆ ತಿಳಿಸಿಲ್ಲ ಅಂದರೆ ಸರಿ, ಎದುರುದಾರ ನಂ.4 ಇವರಿಗೆ ತಿಳಿಸಿದ್ದೇನೆ. ಈ ಅಪಘಾತ ನನ್ನದೇ ತಪ್ಪಿನಿಂದ ಆಯಿತು ಅನ್ನುವುದು ಸರಿಯಲ್ಲ. ಲಾರಿ ಚಾಲಕನ ತಪ್ಪಿನಿಂದ ಆಗಿಲ್ಲ ಅನ್ನುವುದು ಸರಿಯಲ್ಲ.

4. ಕಾರ್ ರಿಪೇರಿ ಕುರಿತು ಯಾವುದೇ ಬಿಲ್ಲು ಹಾಜರುಪಡಿಸಿಲ್ಲ ಅಂದರೆ ಸರಿ. ಆದರೆ ಎದುರುದಾರ ನಂ.3 ಯಾವುದೇ ಪರಿಹಾರ ಕೊಡುವ ಹೊಣೆಗಾರಿಕೆ ಹೊಂದಿಲ್ಲ ಅಂದರೆ ಸರಿಯಲ್ಲ.

**<u>ಪಾಟೀ ಸವಾಲು: ಎದುರುದಾರ ನಂ.4 ಪರ ಶ್ರೀ S.R.H ವಕೀಲರಿಂದ:</u>**

5. ಅಪಘಾತ ಸಂದರ್ಭ ಜಹೀರ್ ಅಹಮ್ಮದ್ ಈ ಕಾರ್ ನಂ.ಕೆಎ-37/ಎ-8254 ಓಡಿಸುತ್ತಿದ್ದರು ಅವರು ಇದೇ ಅಪಪಘಾತದಲ್ಲಿ ಮರಣ ಹೊಂದಿದರು. ನಮ್ಮ ಕಾರ್ ಚಾಲಕ ಮತ್ತು ಲಾರಿ ಚಾಲಕನ ಮೇಲೆ ಚಾರ್ಜಶೀಟ್ ಆಗಿದೆ ಅನ್ನುವುದು ಗೊತ್ತಿಲ್ಲ. ಅಪಘಾತವಾದ ನಂತರ ಕಾರ್ ಡ್ಯಾಮೇಜ್ ಆದುದ್ದಕ್ಕೆ ಪರಿಹಾರ ಕೇಳಿ ನಮ್ಮ ವಿಮೆ ಕಂಪನಿಗೆ ಅರ್ಜಿ ಕೊಟ್ಟಿದ್ದೆ ಅಂದರೆ ಸರಿ. ಅವರು ಯೋಗ್ಯ ಡಿ.ಎಲ್ ಇಲ್ಲ ಎಂದು ಹೇಳಿ ವಜಾ ಮಾಡಿದರು ಅಂದರೆ ಸರಿ. ಆ ಅಪಘಾತದಲ್ಲಿ ಮರಣ ಹೊಂದಿದ ವ್ಯಕ್ತಿಗಳಿಗೆ MVC No.322/2021, 107/2022 ಇದರಲ್ಲಿ ಇದೇ ನ್ಯಾಯಾಲಯದಲ್ಲಿ ದಿನಾಂಕ:14-12-2024 ರಂದು ರಾಜಿಯಾಗಿ ಲಾರಿ ವಿಮೆ ಕಂಪನಿಯವರು ಪರಿಹಾರ ಕೊಟ್ಟಿದ್ದಾರೆ ಅನ್ನುವುದು ಸರಿ.

6. ನಮ್ಮ ಕಾರ್ ರಿಪೇರಿಗೂ ಸಹ ಪರಿಹಾರ ಕೊಡಲು ಲಾರಿ ನಂ.TS-15/UE-1110 ವಿಮೆ ಕಂಪನಿಯವರೇ ಜವಬ್ದಾರರು ಅನ್ನುವುದು ಸರಿ. ಕಾರ್ ವಿಮೆ ಕಂಪನಿಯವರು ಪರಿಹಾರ ಕೊಡಲು ಬರುವುದಿಲ್ಲಾ ಎಂದು ನಮ್ಮ ಅರ್ಜಿ ರಿಜೆಕ್ಟ್ ಮಾಡಿದ್ದನ್ನು ಪ್ರಶ್ನಿಸಿ ನಾನು ಕಂಜೂಮರ್ ಕೋರ್ಟಿಗೆ ಹೋಗಿಲ್ಲ ಅನ್ನುವುದು ಸರಿ.

**<u>ಮರು ವಿಚಾರಣೆ: ಇಲ್ಲ</u>**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಹಿರಿಯ ವ್ಯವಹಾರ ನ್ಯಾಯಾಧೀಶರು, ಕೊಪ್ಪಳ.**